Regd No BG 155 15-11-1969

# SATYAVADI Daily, MYSORE 4 ★ 53 rd Year of Publication

ಶ್ರೀ ಸತ್ಯನಾರಾಯಣ
ಬೆನಿಫಿಟ್ ಸ್ಕೀಂ
(ಚಾಮುಂಡೇಶ್ವರಿ ಟೂಕೀಸ್ ಕಟ್ಟಡ)
203, ಸಯ್ಯಾಜಿರಾವ್ ರಸ್ತೆ,
ಮೈಸೂರು 1
ಮೇಲ್ಕಂಡ ಯೋಜನೆಗೆ
ಇಂದೇ ಚಂದಾದಾರರಾಗಿರಿ
ಅದರ ಫಲವನ್ನು ಪಡೆಯಿರಿ

Golden Jubilee Celebrated Paper

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [ 2 ಪೈಸೆ

# ಉನ್ನತ ಮಟ್ಟದ ತ್ಯಾಗಕ್ಕೆ ಫತೇಸಿಂಗ್ ಸಿದ್ಧ

### ಪ್ರಧಾನರ ಕಡೆಯವರಿಂದ ಬೆದರಿಕೆ

ಪ್ರಧಾನಿಯವರನ್ನು ಬೆಂಬಲಿಸದಿದ್ದರೆ ತೀವ್ರ ಪರಿಣಾಮವನ್ನು ಎದುರಿಸಬೇಕಾಗುವುದೆಂದು ಒಂದು ಟ್ರಕ್ ತುಂಬಾ ಪ್ರಧಾನಿ ಬೆಂಬಲಿಗರು ತನಗೆ ಬೆದರಿಕೆ ಹಾಕಿರುವುದಾಗಿ ನವ ದೆಹಲಿಯಲ್ಲಿ ಲೋಕಸಭೆ ಸದಸ್ಯರಾದ ಶ್ರೀ ಹರಿಕಿಷ್ಣ ತಿಳಿಸಿರುವರು.

★

### ತ್ಯಾಗಕ್ಕೆ ಸಿದ್ಧ

ಚಂಡೀಘರ, ಭಕ್ರಾ ಭಾಗಗಳು ಮತ್ತಿತರ ಪಂಜಾಬಿನಾತನಾಡುವ ಭಾಗಗಳನ್ನು ಪಂಜಾಬಿಗೆ ಪಡೆಯಲು ತಾವು ಉನ್ನತ ಮಟ್ಟದ ತ್ಯಾಗ ಮಾಡುವುದಾಗಿಯೂ ತಮ್ಮ ಕಟ್ಟಕಡೆ ನಿರ್ಧಾರವನ್ನು ತಾ|| 24 ರಂದು ತಿಳಿಸುವುದಾಗಿಯೂ ಅಕಾಲಿ ದಳದ ಅಧ್ಯಕ್ಷ ಸಂತ ಫತೇಸಿಂಗ್ ಫಿರೋಜಪುರದಲ್ಲಿ ತಿಳಿಸಿದರು.

★

### ಪ್ರಧಾನರಲ್ಲಿ ನಂಬಿಕೆ

ಪ್ರಧಾನಿಯವರು ಈಕೆಗೆ ತೆಗೆದುಹಾಕಿದ ನಾಲ್ಕು ಕೆರಿಯ ಮಂತ್ರಿಗಳ ಪೈಕಿ ಶ್ರೀ ಮುತ್ಯಾಲರಾವ್ ಶ್ರೀಮತಿ ಇಂದಿರಾರವರ ನಾಯಕತ್ವದಲ್ಲಿ ತಮ್ಮ ಬೆಂಬಲ ವ್ಯಕ್ತ ಪಡಿಸಿರುವರೆಂದು ನವ ದೆಹಲಿ ವಾರ್ತೆ ತಿಳಿಸುತ್ತದೆ.

★

### ಉಪವಾಸ ಬೆದರಿಕೆ

ಶ್ರೀಮತಿ ಇಂದಿರಾ ಗಾಂಧಿಯವರನ್ನು ಪಕ್ಷದಿಂದ ಹೊರದೂಡಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ತೀರ್ಮಾನವನ್ನು ಈ ತಿಂಗಳು 23 ನೇ ತಾ|| ನೊಳಗೆ ರದ್ದುಪಡಿಸದಿದ್ದರೆ ಪ್ರತಿಭಟನಾರ್ಥ ತಾವು ಆಮರಣಾಂತ ಉಪವಾಸವನ್ನು ಕೈಗೊಳ್ಳುವುದಾಗಿ ಭಾರ್ಗವಾ ದಾಸ್ ಮುಲ್ತಾನಿ ನಿರ್ಧರಿಸಿರುವರೆಂದು ಕಲ್ಕತ್ತಾ ವಾರ್ತೆ ತಿಳಿಸುತ್ತದೆ.

### ನ್ಯಾಯಾಂಗ ಪಂಚಾಯಿತಿಯಂತೆ

ಪುಣೆಯಲ್ಲಿ ಸಮಾವೇಶವಾಗಿರುವ ಮಹಾರಾಷ್ಟ್ರ ಶಾಸನ ಸಭೆಯಲ್ಲಿ ಜನಸಂಘದ ನಾಯಕ ಶ್ರೀ ವೆಲಿಯೇರು ಮಾತನಾಡುತ್ತಾ, ಮೈಸೂರು ಮತ್ತು ಮಹಾರಾಷ್ಟ್ರ ಗಡಿ ವ್ಯವಸ್ಥೆಗೆ ಭದ್ರವಾದ ತತ್ವದ ಮೇಲೆ ನ್ಯಾಯಾಂಗ ಪಂಚಾಯಿತಿ ನಡೆಯಬೇಕೆಂದೂ ತಿಳಿಸಿದರು.

●

### ಮುಷ್ಕರ ನಿಂತಿತು

ಪೋಲೀಸಿನವರಿಂದ ತೊಂದರೆ ಆಗುವುದಿಲ್ಲವೆಂಬ ಭರವಸೆ ಮೇಲೆ ಮೈಸೂರು ನಗರದಲ್ಲಿ ಕೈಗಾಡಿಯವರ ಮುಷ್ಕರ ನಿಂತಿತು.

●

### ಪದವೀಧರರ ಸಂಖ್ಯೆ

1970ರ ವೇಳೆಗೆ ದೇಶದಲ್ಲಿ ನಿರುದ್ಯೋಗಿ ಇಂಜಿನಿಯರು ಮತ್ತು ಪದವೀಧರರ ಸಂಖ್ಯೆ 60 ಸಾವಿರದಷ್ಟು ಆಗುವುದೆಂದು ಬೆಂಗಳೂರಿನಲ್ಲಿ ಅಭಿಪ್ರಾಯಪಡಲಾಗಿದೆ.

★

### ಉಡುಪಿಗೆ ಕೇಳಿಕೆ

ಶ್ರೀನಗರದಿಂದ ಬಂದಿರುವ ವಾರ್ತೆಯ ಪ್ರಕಾರ ಕಾಶ್ಮೀರದವರು ಧರಿಸುವ ಫೆರ್ಹಾ ಎಂಬ ಒಂದು ರೀತಿಯ ಉಡುಪಿನ ರಫ್ತಿಗೆ ಕೇಳಿಕೆ ಹೆಚ್ಚಿದೆ. ಅಮೇರಿಕಾ ಸೇರಿ ಪಾಶ್ಚಾತ್ಯ ದೇಶಗಳಿಂದ ಒಂದು ಬೊಂಬಾಯಿ ಉಡುಪಿನ ಸಂಸ್ಥೆಗೆ ಲಕ್ಷಾಂತರ ರೂಪಾಯಿಗಳ ಆರ್ಡರು ಬಂದಿದೆ. ಮುಂದಿನ ವರ್ಷ ದೇಶಕ್ಕೆ ಒಂದು ಕೋಟಿ ರೂಪಾಯಿಗಳ ವಿದೇಶಿ ವಿನಿಮಯ ದೊರೆಯುವ ಅಂದಾಜಿದೆ

### ವಿದೇಶಿ ವಿನಿಮಯ

ತೇಗದ ಮರವನ್ನು ವಿದೇಶಗಳಿಗೆ ಆಮದು ಮಾಡಲು ಆಸ್ಟ್ರೇಲಿಯಾದಲ್ಲಿ ತೇಗದ ಮರ ಹೆಚ್ಚಾಗಿ ಬೆಳೆಯುವಂತೆ ಕೇಂದ್ರ ಸರ್ಕಾರ ಸೂಚಿಸಿದೆ.

ದಸರಾ ವಸ್ತುಪ್ರದರ್ಶನದಲ್ಲಿ
ವಿಶೇಷ ಮನರಂಜನೆ ಕಾರ್ಯಕ್ರಮ
ತಾ|| 16-11-1969 ಭಾನುವಾರ
ಸಂಜೆ 7 ಘಂಟೆಗೆ
ಮದ್ರಾಸಿನ ಪ್ರಸಿದ್ಧ ಸಿನಿಮಾ ನಟ ಶ್ರೀ ಟಿ. ಆರ್. ನರಸಿಂಹರಾಜು
ಅವರ ತಂಡದವರಿಂದ
'ಸದ್ಭಾರ್ಮ'
ಎಂಬ ನಾಟಕ.
ಪ್ರವೇಶ ದರ 50. ಪೈಸೆ.

### ಜಂಬೂಸವಾರಿ ಮೆರವಣಿಗೆ

ಮೈಸೂರು ಜಂಬೂಸವಾರಿ ಮೆರವಣಿಗೆಯಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದ್ದ ಕಲಾ ತಂಡಗಳಲ್ಲಿ ಕೇರಳದ ಕಥಕಳಿ ನೃತ್ಯ ತಂಡವೂ ಒಂದು. ಈ ತಂಡವು ಕಥಕಳಿ ನೃತ್ಯದ ಜೊತೆಗೆ ಕೇರಳದ ಜಾನಪದ ನೃತ್ಯವನ್ನೂ ಪ್ರದರ್ಶಿಸಲಿದೆ.

### ಜಂಬೂಸವಾರಿ ಕುದುರೆ ಪಂದ್ಯದಲ್ಲಿ

ಮೈಸೂರು ಜಂಬೂಸವಾರಿ ಕುದುರೆ ಪಂದ್ಯದಲ್ಲಿ ವ್ಯವಸ್ಥೆ ಆಗಬಹುದಾಗಿರುವ ಕ್ವಿನೆಲಾ ಹಣ ರೂ. 1777, ಡಬ್ಬಲ್ ಈವೆಂಟ್‌ನ ರೂ. 110, ಟ್ರಿಬೆಲ್ ಈವೆಂಟ್ ರೂ. 346, ಭಾನುವಾರದ ಪಂದ್ಯಕ್ಕೆ ಮುಂದುವರಿಸಲಾಗಿದೆ.

○

### ಏರಿಕೆ

ಈಗಿನ ಅಂಕಿ ಆಂಶಗಳ ಪ್ರಕಾರ ಭಾರತದ ಭಂಗಾರ ಮತ್ತು ಸವರ್ಣ ವಿನಿಮಯ ರೂ. 645.21 ಕೋಟಿಗೆ ಏರಿತು.

★

### ನೇಪಾಳಕ್ಕೆ ಸಾಲ

ನೇಪಾಳಕ್ಕೆ ಟಿಲಿ ಕಮ್ಯೂನಿಕೇಷನ್ ಅಭಿವೃದ್ಧಿಗೆ ಭಾರತವು ರೂ. 18 ಮಿಲಿಯ ಸಾಲ ಕೊಡುವುದು.

★

### ಕನ್ನಡ ರಾಜ್ಯೋತ್ಸವ

ನವ ದೆಹಲಿಯ ಸಪ್ರೂ ನಿವಾಸದಲ್ಲಿ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಉಪಾಧ್ಯಕ್ಷ ಶ್ರೀ ಪಾಠಕರು ನಾಳೆ ಉದ್ಘಾಟಿಸುವರು. ಮಾರನೇ ದಿನ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀ ಮುತಾರ್ಜಿ ದೇಸಾಯಿರು ಮುಖ್ಯ ಅತಿಥಿಗಳಾಗಿರುವರು.

### ಉದಾರ ನೆರವು

ಪ್ರಧಾನಿ ಪರಿಹಾರ ನಿಧಿಯಿಂದ ಆಂಧ್ರ ಪ್ರದೇಶದ ಪ್ರವಾಹ ಸಂತ್ರಸ್ತರಿಗೆ ರೂ. ಅರ್ಧ ಲಕ್ಷ ಉದಾರ ದಾನ ಮಾಡಿರುವರು. ಬಿಜಾಪುರದ ಜಿಲ್ಲಾಧಿಕಾರಿಗಳಿಗೆ 5 ಸಾವಿರ ರೂ. ಕಳುಹಿಸಿ ಕಳೆದ ತಿಂಗಳು ಭೀಕರ ಮಳೆಯಿಂದ ನೊಂದವರಿಗೆ ಹಂಚಲು ತಿಳಿಸಿರುವರು.

○

### 25 ಭಾಷೆಗಳಲ್ಲಿ ಪ್ರಕಟಣೆ

ಸಿಕ್ಖರ ಪವಿತ್ರಗ್ರಂಥ ಗ್ರಾಫ್ಜ್ ಸಾಹಿಬ್ ಚೀನಿ, ಇಟಲಿ, ಸ್ಪೇನ್, ರಷ್ಯ, ಫ್ರೆಂಚ್, ಇಂಡೋನೇಷಿಯ ಭಾಷೆಗಳೂ ಸೇರಿ 25 ಭಾಷೆಗಳಲ್ಲಿ ಪ್ರಕಟವಾಗುತ್ತಿದೆ ಎಂದು ನವ ದೆಹಲಿ ವಾರ್ತೆ. ಇದಕ್ಕೆ 2 ಲಕ್ಷ ರೂ ವೆಚ್ಚ ತಗಲುವದೆಂದು ಗುರುದ್ವಾರ ಪ್ರಬಂಧಕ ಸಮಿತಿ ಕಾರ್ಯದರ್ಶಿ ತಿಳಿಸಿದ್ದಾರೆ.

★

ಸೋಮವಾರ ಪಾರ್ಲಿಮೆಂಟ್ ಸ್ಥಾನ ಭವಾದಾಗ ಇಂದಿರಾ ಸರ್ಕಾರದ ಅಳಿವು ಉಳಿವಿಗಾಗಿ ವಿರೋಧ ಮತ್ತು ಪರರಲ್ಲಿ ಕದನ ನಡೆಯುತ್ತಿದೆ.

★

ಮೈಸೂರು ಅರಮನೆ ನೌಕರರ ಸಹಕಾರಿ ಗೃಹ ಮುಂದಕ್ಕೆ ಹೋಗಿದೆ.

ಸ್ತ್ರೀ ಧರ್ಮ— (ಶ್ರೀ ಸತ್ಯಸಾಯಿಬಾಬಾರವರು ಬೋಧನೆ)

ಸತಿಯಾದವಳು ತನ್ನ ಪತಿಯ ಗೃಹವನ್ನು ಒಂದು ಪವಿತ್ರವಾದ ಮಂದಿರದಂತೆ ಭಾವಿಸಿದ್ದೇ ಆದರೆ ತನಗೆ ಅವಶ್ಯಕವಾದ ಸಕಲ ವಿಷಯಗಳೂ ಅನುಭವದಿಂದ ಅವಳಿಗೆ ಪ್ರಾಪ್ತವಾಗುವುವು. ಪತಿಯ ಗೃಹಕ್ಕಿಂತ ಉತ್ತಮವಾದ ಪ್ರದೇಶವು ಯಾವ ದೇಶದಲ್ಲಿಯೂ ಇಲ್ಲ. ಆದ್ದರಿಂದಲೇ ಒಬ್ಬ ಮಹಾ ಭಕ್ತನು ಹೀಗೆ ಹೇಳಿದ್ದಾನೆ—

"ಮಾತೃಗೃಹವನ್ನು ತ್ಯಜಿಸಿ ತಾನು ಬಂದು ಸೇರುವ ಪತಿಯ ಗೃಹವು ಸತಿಯಾದವಳಿಗೆ, ಆ ಪತಿಯ ಗೃಹದಲ್ಲಿರುವ ಎಲ್ಲರ ತಪ್ಪುಗಳನ್ನೂ ಸಹಿಸಿಕೊಂಡು, ಪುಣ್ಯಕಾರ್ಯಗಳನ್ನು ಮಾಡುವುದಕ್ಕೆ ಅನುವಾದ ಒಂದು ಪವಿತ್ರ ದೇವಾಲಯವು; ಮತ್ತು ಸಮಸ್ತ ಗ್ರಂಥಗಳ ಮತ್ತು ಶಾಸ್ತ್ರಗಳ ಸಾರವನ್ನು ಕಲಿಸುವ ಒಂದು ಪಾಠಶಾಲೆ; ಆ ಪತಿಯ ಗೃಹವೇ ಸತಿಗೆ ತಿಳ್ಲಿರುವ ವಿವಿಧ ಬಂಧುಗಳನ್ನು ಅವರವರ ಮನೋನುಕೂಲಗಳಂತೆ ನಡೆದುಕೊಂಡು ಅವರೆಲ್ಲರಿಗೂ ಮನಸ್ಸಂತೋಷವನ್ನುಂಟು ಮಾಡಬಹುದಾದ ಒಂದು ವಿಹಾರಭೂಮಿಯೂ ಆಗಿರುವುದು. ತನ್ನ ಪಾತಿವ್ರತ್ಯದ ಮಹಾತ್ಮ್ಯದಿಂದ ಬಹ್ಮಶಿವಾದಿಗಳನ್ನೂ ಕೂಡ ತನ್ನ ಕೈಗೊಂಬೆಯಂತೆ ಆಡಿಸಬಹುದಾದ ಅತ್ಯಂತ ಘನತರವಾದ ಮಹಿಮೆಯನ್ನುಂಟುಮಾಡುವ ಒಂದು ಮಂತ್ರಶಾಲೆಯೇ ಆ ಪತಿಯ ಗೃಹವು. ಸತಿಯಾದವಳ ಅನುರಾಗವು ಸರ್ವವನ್ನೂ ಸಾಧಿಸಿಕೊಡಬಲ್ಲ ಸಾಮರ್ಥ್ಯವುಳ್ಳದ್ದು. 'ಪತಿಯ ಸೌಭಾಗ್ಯವೆಂಬ' ಕಲ್ಯಾಣಕ್ಕೆ ಕಲ್ಪವೃಕ್ಷವೆನಿಸಿರುವುದು: ಮತ್ತು ಪ್ರಣಯ, ತ್ಯಾಗ, ಉಪದೇಶ, ವೈರಾಗ್ಯ, ಇವುಗಳಿಗೆ ತೌರುಮನೆಯು. ಈ ರೀತಿಯಾಗಿ ಪತಿಯ ಗೃಹವೇ ಸತಿಯಾದವಳಿಗೆ ಒಂದು ಪವಿತ್ರವಾದ ವಿದ್ಯಾಮಂದಿರವು".

——

ದಿವ್ಯವಾಣಿ

ಯಾರು ತನ್ನ ದೇಶವನ್ನು ಪ್ರೀತಿಸಲಾರರೋ ಅವನು ಮತ್ತೇನನ್ನೂ ಪ್ರೀತಿಸಲಾರನು. — ಬೈರ್ಡ್.


# SHAKTI SUDHA

A Superb Tonic

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿವಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಯವಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ 2

# ದೇಶದ ಹಿತಕಾಗಿ
ಕುಟುಂಬ ಯೋಜನೆ

ಅಖಿಲ ಭಾರತದಲಿ ಕೂಡಲೇ
ಗೋವಧೆ ನಿಷೇಧವಾಗಲಿ

ವುಡ್‌ಲಾಂಡ್ ತಾ.14-11-69 ರಿಂದ
ಶಿ ನ ಅಮೋಘ ಪ್ರಾರಂಭ
— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —
# ಹ ಮ್ ಸಾ ಯ
ಪಾತ್ರ: ಮಾಲಾಸಿನ್ಹಾ, ಜಾಯ್ ಮುಖರ್ಜಿ, ಶರ್ಮಿಳಾ ಟಾಗೂರ್
ಸಂಗೀತ: ಓ. ಪಿ. ನಯ್ಯಾರ್
[ ದಿನ 8 ಪ್ರದರ್ಶನಗಳು ]

ಅಪೆರಾ— 14-11-69 ರಿಂದ
.... ಅತ್ಯಮೋಘ ತಮಿಳು ಚಿತ್ರ ....
# ವೇಟ್ಟೈಕಾರನ್
ದಿನ 3 ಆಟಗಳು

# Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ
# Protectthe Cow

Quality Printing — Neat Binding
## Lakshminarasimha Press
Sivarampet, Mysore


Edited, Printed & Published by Dharmaprachara Nirata M S Krishna Rao ( Proprietor ) at the Satyavadi Press Chamarajapura, Mysore